ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ,
ನವಲಗುಂದ

ಸಿ.ಸಿ. ನಂ.**866/2024**

ಫಿರ್ಯಾದಿದಾರರು : ಶ್ರೀಯುತ ಬುಡ್ಡಾಜಿ ತಂದೆ ರಾಮಣ್ಣಾ ಕಲಾಲ,
ವಯಾಃ 50 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ನವಲಗುಂದ, ತಾಃ ನವಲಗುಂದ,
ಜಿಲ್ಲಾಃ ಧಾರವಾಡ.

ವಿರುದ್ಧ

ಆರೋಪಿತರು : ಶ್ರೀಯುತ ಪ್ರಕಾಶ ತಂದೆ ಶೇಖರಗೌಡ ಮುದಿಗೌಡ್ರ,
ವಯಾಃ 45 ವರ್ಷ, ಉದ್ಯೋಗಃ ಶೇತ್ಕಿ/ವ್ಯಾಪಾರ,
ಸಾಃ ಬಸವೇಶ್ವರ ನಗರ, ನವಲಗುಂದ,
ತಾಃ ನವಲಗುಂದ, ಜಿಲ್ಲಾಃ ಧಾರವಾಡ.

ಆಪಾದನೆ

ಆರೋಪಿಯಾದ ನೀವು ನಿಮ್ಮ ಕುರಿ ಕುರಿ ಹಾಗೂ ಪೆಪ್ಸಿ ಖರೀದಿಸಿ ಮಾರುವ (ಡೀಲರಸಿಪ್) ವ್ಯವಹಾರದ ಸಲುವಾಗಿ ಜರೂರ ಹಣದ ಅವಶ್ಯಕತೆ ಉಂಟಾಗಿದ್ದರಿಂದ ಫಿರ್ಯಾದಿ ಶ್ರೀಯುತ ಬುಡ್ಡಾಜಿ ತಂದೆ ರಾಮಣ್ಣಾ ಕಲಾಲ ಇವರಿಂದ ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ದಿನಾಂಕಃ 15.08.2023 ರಂದು 3-4 ತಿಂಗಳುಗಳಲ್ಲಿ ಮರಳಿ ಕೊಡುವುದಾಗಿ ಹೇಳಿ ಅವರಿಂದ ಕೈಗಡ ಸಾಲವನ್ನು ಪಡೆದಿದ್ದು ಇರುತ್ತದೆ. ನಂತರ ಫಿರ್ಯಾದಿರವರು ನಿಮಗೆ ಕೊಟ್ಟಿರುವ ಹಣವನ್ನು ಮರುಪಾವತಿ ಮಾಡಬೇಕು ಎಂದು ವಿನಂತಿಸಲು, ನೀವು ದಿನಾಂಕಃ 23.11.2023 ರಂದು ನಿಮ್ಮ ಬ್ಯಾಂಕ್ ಖಾತೆ ಹೊಂದಿರುವ ಭಾರತೀಯ ಸ್ಟೇಟ್ ಬ್ಯಾಂಕ್, ಗದಗ ರೋಡ, ನವಲಗುಂದ ಶಾಖೆಯ ಚೆಕ್ಕ ನಂ.833295 ನೇದ್ದನ್ನು ಫಿರ್ಯಾದಿಗೆ ನೀಡಿದ್ದು ಇರುತ್ತದೆ.

ಆನಂತರ ಫಿರ್ಯಾದಿರವರು ನೀವು ಕೊಟ್ಟ ಮೇಲ್ಕಾಣಿಸಿದ ಚೆಕ್‌ನ್ನು ಅದೇ ದಿನ ನಗದೀಕರಣಗೊಳಿಸಿಕೊಳ್ಳಲು ತನ್ನ ಬ್ಯಾಂಕಾದ ಭಾರತೀಯ ಸ್ಟೇಟ್ ಬ್ಯಾಂಕ್, ನವಲಗುಂದ ಶಾಖೆ ಇವರಲ್ಲಿ ನಗದೀಕರಣಕ್ಕೆ ಸಲ್ಲಿಸಿದ್ದು ಸದರಿ ಚೆಕ್ಕು ನಗದೀಕರಣವಾಗದೇ, ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲಾ" ಅಂತಾ ಕಾರಣ ಕಾಣಿಸಿ ಚೆಕ್ ಅಮಾನ್ಯವಾಗಿ ದಿನಾಂಕಃ23.11.2023 ರಂದು ಅನಾವರಣಗೊಂಡಿರುತ್ತದೆ ಎಂದು ಮೆಮೊ ಮೂಲಕ ಮರಳಿ ಬಂದಿರುತ್ತದೆ. ನಂತರ ದಿನಾಂಕಃ13.12.2023 ರಂದು ಫಿರ್ಯಾದಿದಾರರು ತನ್ನ ನ್ಯಾಯವಾದಿಗಳ ಮೂಲಕ ಚೆಕ್ಕು ಅಮಾನ್ಯವಾದ ಕುರಿತು ನೊಂದಾಯಿತ ಅಂಚೆ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದು ಅದನ್ನು ನೀವು ದಿನಾಂಕಃ14.12.2023 ಪಡೆದುಕೊಂಡಿದ್ದರೂ ಸಹ ಆರೋಪಿಯಾದ ನೀವು ಇಲ್ಲಿಯವರಗೆ ಫಿರ್ಯಾದಿಗೆ ಕೊಡಬೇಕಾದ ಹಣವನ್ನು ನೀಡಿರುವುದಿಲ್ಲಾ ಮತ್ತು ಫಿರ್ಯಾದಿಯು ಕೊಟ್ಟ ನೋಟಿಸಿಗೆ ಯಾವುದೇ ಉತ್ತರವನ್ನೂ ಸಹಾ ನೀಡಿರುವುದಿಲ್ಲ. ಆದ್ದರಿಂದ ನೀವು ಕಲಂ.138

ಎನ್.ಆಯ್ ಆ್ಯಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

ಪ್ರಶ್ನೆ.1: ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ

ಪ್ರಶ್ನೆ.2: ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

**(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು)**

ನವಲಗುಂದ.
ದಿನಾಂಕಃ **27.01.2025**

(ನವೀನ ಎಫ್.ಡಿಸೋಜಾ)
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನವಲಗುಂದ.